# ಪರಮಪಾವನ ತೀರ್ಥ – ಬೇಲೂರು ಮಠ

ಸ್ವಾಮಿ ಜ್ಞಾನಸುಧಾನಂದ

ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾಗಿರುವ ಬೇಲೂರು ಮಠವು ಹಲವು ಕಾರಣಗಳಿಂದ ಅತಿಪಾವನ ತೀರ್ಥಕ್ಷೇತ್ರವೆನಿಸಿದೆ. ಸ್ವಾಮೀಜಿಯವರು ಶ್ರೀರಾಮಕೃಷ್ಣರ ಅಸ್ಥಿಯನ್ನು ಇಲ್ಲೇ ಸ್ಥಾಪಿಸಿ ಪೂಜಿಸಿದ್ದರು. ಶ್ರೀಮಾತೆ ಹಾಗೂ ಇತರ ನೇರ ಶಿಷ್ಯರು ನಡೆದಾಡಿದ ಪುಣ್ಯಭೂಮಿ ಇದಾಗಿದೆ. ಇದನ್ನು ಪರಿಚಯಿಸಿ ಕೊಟ್ಟಿರುವ ಲೇಖಕರು ಬೇಲೂರು ಮಠದಲ್ಲಿ ಸೇವಾನಿರತರಾಗಿದ್ದಾರೆ.



ಶ್ರೀರಾಮಕೃಷ್ಣರ ಅವತಾರ ಕಾರ್ಯ ಇನ್ನೇನು ಸಂಪನ್ನಗೊಳ್ಳುವ ಸಮಯ. ಆಗ ಅವರು ಕೊಲ್ಕತ್ತಾದ ಕಾಶೀಪುರದಲ್ಲಿ ವಾಸವಾಗಿದ್ದರು. ಒಂದು ದಿನ ತಮ್ಮ ಪ್ರಿಯ ಶಿಷ್ಯ ನರೇಂದ್ರನನ್ನು ಕರೆದು ಹೇಳುತ್ತಾರೆ, ''ನೀ, ನನ್ನನ್ನು ನಿನ್ನ ಭುಜದ ಮೇಲಿಟ್ಟುಕೊಂಡು ಎಲ್ಲಿಗೆ ಕರೆದೊಯ್ಯುವೆಯೋ ಅಲ್ಲಿಯೇ ನಾನು ಇರುತ್ತೇನೆ. ನೀನು ಮರದ ನೆರಳಲ್ಲಾಗಲಿ ಅಥವಾ ಜೋಪಡಿಯಲ್ಲಾಗಲಿ ನನ್ನನ್ನು ಇರಿಸು. ನಾನಲ್ಲೇ ನೆಲೆಸುತ್ತೇನೆ.'' ಈ ಮಾತುಗಳ ಒಳಾರ್ಥವನ್ನು ನರೇಂದ್ರ ತಕ್ಷಣವೇ ಅರಿತುಕೊಂಡ. ಇದಕ್ಕೆ ಮೊದಲೇ ಶ್ರೀರಾಮಕೃಷ್ಣರು ತಮ್ಮ ಯುವ ಶಿಷ್ಯರಲ್ಲಿ ಸಂನ್ಯಾಸ ಜೀವನದ ಆದರ್ಶವನ್ನು ಬಿತ್ತಿದ್ದರು ಮತ್ತು ನರೇಂದ್ರನೇ ಅವರ ನಾಯಕನೆಂದು ಸೂಚಿಸಿದ್ದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ನರೇಂದ್ರನ ಮುಂದಿದ್ದ ದೊಡ್ಡ ಸವಾಲೆಂದರೆ ತನ್ನ ಗುರುದೇವರಿಗೆ ಒಂದು ಸ್ಥಾಯಿಯಾದ ನೆಲೆಯನ್ನು ಮಾಡುವುದು ಮತ್ತು ತನ್ನಂತೆಯೆ ಶ್ರೀರಾಮಕೃಷ್ಣರ ಪದದೆಡೆ ಸರ್ವಸ್ವವನ್ನೂ ಅರ್ಪಿಸಿದ್ದ ಯುವಕರನ್ನು ಸಂಘಟಿಸುವುದು. ಈ ದಿಸೆಯಲ್ಲಿ ಆಲೋಚನೆ ಪ್ರಯತ್ನಗಳನ್ನು ನರೇಂದ್ರ ಆಗಿಂದಲೇ ಆರಂಭಿಸಿದರೂ ಅವು ಕಾರ್ಯರೂಪಕ್ಕೆ ಬರಲು ಸುಮಾರು ಹನ್ನೆರಡು ವರ್ಷಗಳೇ ಹಿಡಿದವು. ಅಷ್ಟು ಹೊತ್ತಿಗಾಗಲೇ ನರೇಂದ್ರನು ವಿಶ್ವವಿಖ್ಯಾತ ಸ್ವಾಮಿ ವಿವೇಕಾನಂದರಾಗಿ ರೂಪಾಂತರಗೊಂಡಿದ್ದ.

ವಿವೇಕಾನಂದರು ಅಮೇರಿಕಾ ಮತ್ತು ಇಂಗ್ಲೆಡಿನಲ್ಲಿ ವೇದಾಂತ ಪ್ರಚಾರಕಾರ್ಯವನ್ನು ಮುಗಿಸಿ ಭಾರತಕ್ಕೆ ಹಿಂತಿರುಗಿದ್ದು ೧೮೯೭ರಲ್ಲಿ. ಕಲ್ಕತ್ತಾ ನಗರವನ್ನು ತಲುಪಿದ ಮೇಲೆ ಅವರು ಮೊದಲು ಗಮನ ಹರಿಸಿದ್ದು ಶ್ರೀರಾಮಕೃಷ್ಣರ ಹೆಸರಲ್ಲಿ ಮಠ ಒಂದರ ಸ್ಥಾಪನೆಗೆ. ಇದಕ್ಕಾಗಿ ಅವರು ಸ್ವಾಮಿ ಯೋಗಾನಂದರನ್ನು ಮತ್ತು ಹರಿಪ್ರಸನ್ನರನ್ನು (ಮುಂದೆ ಸ್ವಾಮಿ ವಿಜ್ಞಾನಾನಂದ) ಕರೆದು ಗಂಗೆಯ ದಡದ ಮೇಲೆ ಸುಂದರವಾದ ಮತ್ತು ವಿಶಾಲವಾದ ಜಾಗವನ್ನು ಹುಡುಕಲು ಕಳುಹಿಸುತ್ತಾರೆ. ಇವರಿಬ್ಬರು ಆಯ್ಕೆ ಮಾಡಿದ್ದು ಕೊಲ್ಕತ್ತಾದ ಅನತಿದೂರದಲ್ಲಿಯೇ ಗಂಗೆಯ ಪಶ್ಚಿಮ ದಡದಲ್ಲಿ ಬೇಲೂರು ಗ್ರಾಮದಲ್ಲಿದ್ದ ದೊಡ್ಡದಾದ ಒಂದು ಜಾಗ. ಜಾಗವು ಮರಗಿಡಗಳಿಂದ ತುಂಬಿತ್ತು, ಹಾಗೂ ಚಿಕ್ಕದಾದ ಒಂದು ಮನೆಯೂ ಅಲ್ಲಿ ಇತ್ತು. ಆ ಜಾಗದ ಮಾಲೀಕನನ್ನು ಪತ್ತೆ ಹಚ್ಚಿ ಅವನೊಡನೆ ಮಾತುಕತೆ ನಡೆಸಿದರು. ವಿವೇಕಾನಂದರ ಪಾಶ್ಚಾತ್ಯ

ಶಿಷ್ಯೆ ಮಿಸ್ ಮುಲ್ಲರ್ ಜಾಗವನ್ನು ಕೊಂಡುಕೊಳ್ಳಲು ಬೇಕಾದ ಆರ್ಥಿಕ ನೆರವನ್ನು ನೀಡಲು ಒಪ್ಪಿದಳು. ಆದರೆ ಆಕೆಗೆ ಸ್ವಾಮಿ ಯೋಗಾನಂದರು ಆಯ್ಕೆ ಮಾಡಿದ್ದ ಜಾಗ ಹಳ್ಳಕೊಳ್ಳಗಳಿಂದ ತುಂಬಿದ್ದರಿಂದ ಇಷ್ಟವಾಗಲಿಲ್ಲ. ವಿವೇಕಾನಂದರದು ಬೇರೊಂದು ದೃಷ್ಟಿ. ಈ ಜಾಗವನ್ನು ಬಿಟ್ಟು ಗಂಗೆಯ ದಡದಲ್ಲಿ ಮಾರಾಟಕ್ಕಿಟ್ಟಿದ್ದ ಉಳಿದ ಜಾಗಗಳು ಕೊಲ್ಕತ್ತಾದಿಂದ ಸಾಕಷ್ಟು ದೂರ. ಅಲ್ಲಿ ಮಠವನ್ನು ಸ್ಥಾಪಿಸಿದರೆ ಮುಂದೆ ಅಸಂಖ್ಯವಾಗಿ ಬರಲಿರುವ ಶ್ರೀರಾಮಕೃಷ್ಣರ ಭಕ್ತರಿಗೆ ತೊಂದರೆಯಾಗುತ್ತದೆ ಎಂಬುದು. ಆದ್ದರಿಂದ ಹತ್ತಿರದ ಬೇಲೂರಿನಲ್ಲಿರುವ ಜಾಗವನ್ನೇ ಮಾರ್ಚ್ ೧೮೯೮ರಲ್ಲಿ ಖರೀದಿಸಲಾಯಿತು.

ಬಹಳ ಆಶ್ಚರ್ಯವೆಂದರೆ ಒಂದು ರೀತಿಯಲ್ಲಿ ಈ ಜಾಗವು ರಾಮಕೃಷ್ಣ ಮಠಕ್ಕೆಂದು ಪೂರ್ವನಿರ್ಧಾರಿತವಾಗಿತ್ತು. ಈ ಜಾಗವನ್ನು ಖರೀದಿಸುವ ಸುಮಾರು ವರ್ಷಗಳ ಹಿಂದೆಯೇ ವಿವೇಕಾನಂದರ ಅಂತರ್ದೃಷ್ಟಿಗೆ ಈ ಸ್ಥಳ ತೋರಿತ್ತು. ಆಗಿನ್ನೂ ಅವರು ಬಾರಾನಗರದ ಪಾಳುಬಿದ್ದ ಮನೆಯೊಂದರಲ್ಲಿ ಸ್ಥಾಪಿತವಾಗಿದ್ದ ಮಠದಲ್ಲಿ ವಾಸವಾಗಿದ್ದರು. ಒಮ್ಮೆ ಅಲ್ಲೇ ಸನಿಹದಲ್ಲಿದ್ದ ಘಾಟಿನ ಬಳಿ ನಿಂತು ಅವರು ಉದ್ಗರಿಸಿದ್ದರಂತೆ: ''ನಮ್ಮ ಸ್ಥಾಯಿಯಾದ ಮಠ ಇಲ್ಲಿಯೇ ಗಂಗೆಯ ಆಚಿನ ತೀರದಲ್ಲಿ ತಲೆಯೆತ್ತುವುದೆಂದು ನನ್ನಲ್ಲಿ ಯಾರೋ ಹೇಳುತ್ತಿರುವಂತಿದೆ'' ಎಂದು! ಇಷ್ಟೇ ಅಲ್ಲದೆ ಶ್ರೀಮಾತೆ ಶಾರದಾದೇವಿಯವರಿಗೂ ಈ ಜಾಗದಲ್ಲಿ ಬಹಳ ಹಿಂದೆಯೇ ಒಂದು ದಿವ್ಯ ದರ್ಶನವಾಗಿತ್ತು. ಶ್ರೀಮಾತೆಯವರು ಒಮ್ಮೆ ನೌಕೆಯ ಮೂಲಕ ಗಂಗೆಯ ಮೇಲೆ ಈ ಜಾಗದ ಬಳಿ ಪ್ರಯಾಣಿಸುತ್ತಿದ್ದಾಗ, ಇಲ್ಲಿಯೇ ಇದ್ದ ಬಾಳೆಯ ತೋಟದಲ್ಲಿ ಶ್ರೀರಾಮಕೃಷ್ಣರು ಓಡಾಡುತ್ತಿದ್ದುದನ್ನು ಕಂಡು ಬೆರಗುಗೊಂಡಿದ್ದರು. ಆ ದರ್ಶನದ ವಿಷಯವನ್ನು ತಮ್ಮ ಸಂಗಡಿಗರೊಂದಿಗೆ ಅಂದೇ ಹಂಚಿಕೊಂಡರು ಸಹ. ಮುಂದೆ ವಿವೇಕಾನಂದರು ಆ ಜಾಗವನ್ನು ಮಠದ ಸ್ಥಾಪನೆಗಾಗಿ ಖರೀದಿಸಿದ್ದಾರೆಂದು ಗೊತ್ತಾದಾಗ ಅವರು, ''ಶ್ರೀರಾಮಕೃಷ್ಣರು ಆ ಜಾಗವನ್ನು ಮುಂಚೆಯೇ ಆರಿಸಿಕೊಂಡಿದ್ದರು. ಗಂಗೆಯ ಪಶ್ಚಿಮದಡ ಕಾಶಿಯಂತೆಯೇ ಪವಿತ್ರವಾದದ್ದು. ನರೇಂದ್ರನು ತುಂಬ ಒಳ್ಳೆಯ ಕೆಲಸವನ್ನೇ ಮಾಡಿದ್ದಾನೆ'' ಎಂದು ತಮ್ಮ ಸಂಪೂರ್ಣ ಸಮ್ಮತಿಯನ್ನು ಸೂಚಿಸಿದರು.

ಹೊಸದಾಗಿ ಖರೀದಿಸಿದ ಜಾಗದಲ್ಲಿ ಮಠ ಸ್ಥಾಪನೆಯ ಕೆಲಸ ಪ್ರಾರಂಭವಾಯಿತು. ನೆಲವನ್ನು ಸಮಗೊಳಿಸುವುದು, ಇದ್ದ ಒಂದು ಚಿಕ್ಕ ಮನೆಯ ದುರಸ್ತಿ ಮತ್ತು ವಿಸ್ತರಣೆ, ಹಾಗೆಯೇ ಮತ್ತೊಂದು ಮಂದಿರವನ್ನೊಳಗೊಂಡ ಎರಡಂತಸ್ತಿನ ಕಟ್ಟಡದ ನಿರ್ಮಾಣ ಕಾರ್ಯಗಳು ಪೂರ್ಣಗೊಳ್ಳಲು ಸುಮಾರು ಎಂಟು ತಿಂಗಳು ಹಿಡಿಯಿತು. ನವನಿರ್ಮಿತ ಮಠದಲ್ಲಿ ಶ್ರೀರಾಮಕೃಷ್ಣರ ಪ್ರತಿಷ್ಠಾಪನೆಯಾದುದು ೧೮೯೮ರ ಡಿಸೆಂಬರ್ ೯ರಂದು. ಆ ದಿನ ರಾಮಕೃಷ್ಣರನ್ನು ಸನಿಹದಲ್ಲೇ ಇದ್ದ ನೀಲಾಂಬರ ಬಾಬುವಿನ ತೋಟದ ಮನೆಯಿಂದ (ರಾಮಕೃಷ್ಣ ಮಠವು ಸುಮಾರು ಒಂದು ವರ್ಷದ ಹಿಂದೆ ಇಲ್ಲಿಗೆ ಸ್ಥಳಾಂತರವಾಗಿತ್ತು) ಕರೆದೊಯ್ದು ಹೊಸ ಜಾಗದಲ್ಲಿ ಪ್ರತಿಷ್ಠಾಪಿಸಬೇಕು. ಶ್ರೀರಾಮಕೃಷ್ಣರು ತಮಗಿತ್ತ ಆದೇಶಕ್ಕನುಗುಣವಾಗಿ ವಿವೇಕಾನಂದರು ತಾವೇ ಸ್ವತಃ ಶ್ರೀರಾಮಕೃಷ್ಣರ ಭಗ್ನಾವಶೇಷಗಳನ್ನು ಶೇಖರಿಸಿಟ್ಟಿದ್ದ ತಾಮ್ರದ ಕಲಶವನ್ನು (ಇದನ್ನು 'ಆತ್ಮಾರಾಮ' ಕಲಶವೆಂದು ಕರೆಯುತ್ತಿದ್ದರು) ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಮೆರವಣಿಗೆಯಲ್ಲಿ ಬೇಲೂರು ಮಠಕ್ಕೆ ಬಂದರು. ಅಲ್ಲಿ ಪೂಜೆ ನೈವೇದ್ಯ ಹವನಾದಿಗಳ ಮೂಲಕ ಅದನ್ನು ಪ್ರತಿಷ್ಠಾಪಿಸಿದರು. ಈ ಸಂದರ್ಭದಲ್ಲಿ ಅವರು ತಮ್ಮ ಪ್ರಿಯ ಶಿಷ್ಯ ಶರತ್‌ಚಂದ್ರ ಚಕ್ರವರ್ತಿಗೆ ಹೇಳಿದರು, ''ಶ್ರೀರಾಮಕೃಷ್ಣರು ಇಲ್ಲಿ ಬಹಳ ವರ್ಷಗಳವರೆಗೆ ಬಹು ಜನರ ಮಂಗಳಕ್ಕಾಗಿ ಗಟ್ಟಿಯಾಗಿ ನೆಲೆಯೂರಿರುತ್ತಾರೆ.'' ಕೆಲ ದಿನಗಳ ನಂತರ ಈ ಪ್ರತಿಷ್ಠಾಪನೆಯ ಸಂದರ್ಭವನ್ನು ನೆನೆಸಿಕೊಳ್ಳುತ್ತಾ ಅವರೆಂದರು: ''ಶ್ರೀರಾಮಕೃಷ್ಣರನ್ನು ಈ ಹೊಸ ಜಾಗದಲ್ಲಿ ಸಂಸ್ಥಾಪಿಸಿದ ದಿನದಂದು ಅವರ ಭಾವನೆಗಳು ಇಲ್ಲಿಂದ ಪ್ರವಾಹದಂತೆ ಹೊರಚಿಮ್ಮಿ ಇಡೀ ಪ್ರಪಂಚವನ್ನೇ ತುಂಬಿದಂತೆ ನನಗನ್ನಿಸಿತು'' ಎಂದು.

ವಿವೇಕಾನಂದರ ಈ ನುಡಿಗಳು ವೇದವಾಕ್ಯಗಳಿದ್ದಂತೆ. ಅವು ಎಂದಿಗೂ ಹುಸಿಯಾಗಲಾರವು. ಹೀಗೆ ಸ್ಥಾಪಿಸಲ್ಪಟ್ಟ ಬೇಲೂರು ಮಠವು ಕಳೆದ ಸುಮಾರು ೧೨೫ ವರ್ಷಗಳಿಂದ ಅತ್ಯಂತ ಪವಿತ್ರವಾದ ತೀರ್ಥಕ್ಷೇತ್ರವಾಗಿ ಕೇವಲ ಭಾರತದಿಂದಲೇ ಅಲ್ಲದೆ ಪ್ರಪಂಚದ ನಾನಾ ಮೂಲೆಗಳಿಂದ ಆಸ್ತಿಕ ಜನರನ್ನು ಆಕರ್ಷಿಸುತ್ತಿದೆ. ಇಲ್ಲಿಯ ನಿರ್ಮಲ ವಾತಾವರಣದಲ್ಲಿ ಪವಿತ್ರತೆ ಆಧ್ಯಾತ್ಮಿಕತೆಗಳು ಸಹಜವಾಗಿವೆ. ಹೃದಯದಲ್ಲಿ ಕಿಂಚಿತ್ತಾದರೂ ಭಕ್ತಿ ಶ್ರದ್ಧೆಗಳನ್ನಿಟ್ಟುಕೊಂಡು ಬರುವ ಜನರಿಗೆ ಈ ಕ್ಷೇತ್ರದ ದರ್ಶನ ಅವರ ಆಧ್ಯಾತ್ಮಿಕ ಪಿಪಾಸೆಯನ್ನು ಮತ್ತೂ ಹೆಚ್ಚಿಸುವುದಲ್ಲದೆ ಅವರನ್ನು ಧನ್ಯತಾಭಾವದಲ್ಲಿ ಮೈಮರೆಯುವಂತೆ ಮಾಡುತ್ತದೆ. ಸ್ವಾಮಿ ಶಿವಾನಂದರು ಒಮ್ಮೆ ಹೇಳುತ್ತಾರೆ: ''ಆಧ್ಯಾತ್ಮಿಕ ಜೀವನದಲ್ಲಿ ನೀನೇನಾದರೂ ನಿಶ್ಚಯವಾಗಿ ಸಾಧಿಸಬೇಕೆಂದಿದ್ದರೆ ಬೇಲೂರು ಮಠದಲ್ಲಿ ಕೆಲವು ದಿನ ತಂಗಿದ್ದು ಧ್ಯಾನ-ಜಪಗಳನ್ನು ಮಾಡು. ಈ ಉದ್ದೇಶಕ್ಕಾಗಿಯೇ ಸ್ವಾಮಿ ವಿವೇಕಾನಂದರು ಬೇಲೂರು ಮಠವನ್ನು ಸ್ಥಾಪನೆಗೊಳಿಸಿದ್ದು.'' ಎಲ್ಲ ತೀರ್ಥಕ್ಷೇತ್ರಗಳ ಮೂಲೋದ್ದೇಶ ಇದೇ ಅಲ್ಲವೆ?

ಬೇಲೂರು ಮಠದಲ್ಲಿ ಹಲವು ಮಹತ್ವಪೂರ್ಣ ಸ್ಥಳಗಳಿವೆ. ಈ ಎಲ್ಲ ಸ್ಥಳಗಳ ಹಿಂದೆ ಮೈನವಿರೇಳಿಸುವಂತಹ ಐತಿಹ್ಯಗಳಿವೆ. ಇಲ್ಲಿಯ ಭೂಮಿ ಕಟ್ಟಡಗಳ ಪ್ರತಿಯೊಂದು ಅಂಗುಲವು ದೈವೀ ಸಂಪರ್ಕದಿಂದ ಪುನೀತವಾಗಿದೆಯೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಪ್ರಸ್ತುತ ಲೇಖನದ ಮಿತಿಗನುಸಾರವಾಗಿ ನಾವಿಲ್ಲಿ ಕೆಲವು ವಿಚಾರಗಳನ್ನು ನೆನಪಿಸಿಕೊಳ್ಳೋಣ.

ಶಿವಾನಂದರ ಪ್ರಕಾರ ಶ್ರೀರಾಮಕೃಷ್ಣರು ಬೇಲೂರು ಮಠದಲ್ಲಿ ಕೇವಲ ಜಾಗೃತದೇವತೆಯಷ್ಟೇ ಅಲ್ಲ. ಅವರು ವಾಸ್ತವಿಕವಾಗಿ ಸಶರೀರಿಯಾಗಿ ಇಲ್ಲಿ ವಾಸಿಸುತ್ತಿದ್ದಾರೆ. ಅವರ ಮಾತುಗಳಲ್ಲಿ ಹೇಳುವುದಾದರೆ, ''ಶ್ರೀರಾಮಕೃಷ್ಣರು ತಮ್ಮ ಎಲ್ಲ ಪ್ರಭೆ ತೇಜಸ್ಸುಗಳೊಂದಿಗೆ ಇಲ್ಲಿ ವಿರಾಜಿಸುತ್ತಿದ್ದಾರೆ. ಹಿಂದೆ ಹೇಗೆ ನಾವು ದಕ್ಷಿಣೇಶ್ವರದಲ್ಲಿ ಅವರೊಂದಿಗೆ ಮಾತನಾಡುತ್ತ ಕಾಲಕಳೆಯುತ್ತಿದ್ದೆವೊ ಹಾಗೆಯೇ ಇಲ್ಲಿಯೂ ಸಹ ಅವರ ದಿವ್ಯ ಸಾನ್ನಿಧ್ಯದಲ್ಲಿ ಇದ್ದೇವೆ. ಅವರ ಸನ್ನಿಧಿ ನಮ್ಮೆಲ್ಲರ ಮನಸ್ಸನ್ನು ಆನಂದದಿಂದ ತುಂಬಿ ತುಳುಕುವಂತೆ ಮಾಡುತ್ತಿದೆ.''



ಬೇಲೂರು ಮಠ – ಹಳೆಯ ಮಂದಿರ ಮತ್ತು ಸ್ವಾಮೀಜಿ ಕೋಣೆ (ಬಲಭಾಗದಲ್ಲಿ)

ಶಿವಾನಂದರು ಶ್ರೀರಾಮಕೃಷ್ಣರನ್ನು ಮಠದ ಪ್ರಾಂಗಣದಲ್ಲಿ ಅದೆಷ್ಟು ಬಾರಿ ಕಂಡಿದ್ದರೊ! ಶ್ರೀರಾಮಕೃಷ್ಣರು ಪ್ರಾಂಗಣದಲ್ಲಿ ಓಡಾಡುತ್ತಿರುವಂತೆ ಅವರಿಗೆ ದರ್ಶನಗಳಾಗಿದ್ದವು. ಹಾಗಾಗಿ ಅವರು ಪ್ರಾಂಗಣದ ಸ್ವಚ್ಛತೆಯ ಬಗ್ಗೆ ವಿಶೇಷ ಗಮನ ಹರಿಸುತ್ತಿದ್ದರು. ಎಲ್ಲಿಯಾದರೂ ಕಸಕಡ್ಡಿಗಳು ಬಿದ್ದಿರುವುದು ಕಂಡರೆ ಕೋಪ ಗೊಳ್ಳುತ್ತಿದ್ದರು. ಈ ಜಾಗವನ್ನು ಶುಚಿಯಾಗಿಡುವ ಜವಾಬ್ದಾರಿ ಒಬ್ಬ ಕಿರಿಯ ಬ್ರಹ್ಮಚಾರಿಯದಾಗಿತ್ತು. ಅವನು ಶಿವಾನಂದರ ಆದೇಶವನ್ನು ಪಾಲಿಸಲು ತುದಿಗಾಲಿನಲ್ಲಿ ನಿಂತಿರುತ್ತಿದ್ದನಂತೆ. ಮರದಿಂದ ಎಲೆಯೊಂದು ಉದುರಿದರೆ ಅದನ್ನು ನೆಲ ಮುಟ್ಟುವ ಮೊದಲೇ ಈ ಬ್ರಹ್ಮಚಾರಿ ಹಾರಿಹೋಗಿ ಹಿಡಿಯುತ್ತಿದ್ದನಂತೆ.

ಇನ್ನು ಶಿವರೂಪಿಯಾದ ಸ್ವಾಮಿ ವಿವೇಕಾನಂದರ ಸನ್ನಿಧಿ. ಬೇಲೂರು ಮಠದ ಒಂದು ಮುಖ್ಯ ಆಕರ್ಷಣೆಯೆಂದರೆ ವಿವೇಕಾ ನಂದರು ವಾಸವಾಗಿದ್ದ ಕೊಠಡಿ. ಇದೇ ಕೊಠಡಿಯಲ್ಲಿಯೇ ಅವರು ಜುಲೈ ೧೯೦೨ರಂದು ಧ್ಯಾನದಲ್ಲಿ ತಮ್ಮ ಶರೀರವನ್ನು ತ್ಯಜಿಸಿದರು. ಅವರಿಗೆ ಬಹಳ ಪ್ರಿಯವಾಗಿದ್ದ ಈ ಕೊಠಡಿಯನ್ನು ಇಂದಿಗೂ ಅವರ ಸಮಯದಲ್ಲಿ ಹೇಗಿತ್ತೋ ಹಾಗೆಯೇ ಕಾಪಾಡ ಲಾಗಿದೆ. ಅವರು ಉಪಯೋಗಿಸಿದ್ದ ಮೇಜು, ಮಂಚ, ಕುರ್ಚಿ, ನಿಲುಗನ್ನಡಿ, ವಾದ್ಯಯಂತ್ರಗಳು, ಬಟ್ಟೆಬರೆ, ಪಾದರಕ್ಷೆ, ಊರು ಗೋಲು, ರುಮಾಲು ಮುಂತಾದ ಹಲವಾರು ವಸ್ತುಗಳನ್ನು ಇಲ್ಲಿ ಸಂರಕ್ಷಿಸಲಾಗಿದೆ. ಆದರೆ ಈ ಕೊಠಡಿಯನ್ನು ಒಂದು ವಸ್ತುಸಂಗ್ರ ಹಾಲಯವೆಂದು ಭಾವಿಸಬಾರದು. ಇಲ್ಲಿ ವಿವೇಕಾನಂದರು ಸಾಕ್ಷಾ ತ್ತಾಗಿ ವಾಸವಾಗಿದ್ದಾರೆ ಎಂಬುದು ಅವರ ಭಕ್ತರ ದೃಢನಂಬಿಕೆ. ಇದನ್ನು ಪುಷ್ಟಿಗೊಳಿಸಲು ಆಧಾರಗಳು ಸಾಕಷ್ಟಿವೆ.

ವಿವೇಕಾನಂದರ ಮಹಾಸಮಾಧಿಯಾಗಿ ಹಲವು ವರ್ಷಗಳ ನಂತರವೂ ಅವರನ್ನು ಈ ಕೋಣೆಯಲ್ಲಿ ಬಹಳ ಜನ ಕಂಡಿದ್ದಾರೆ. ಶಿವಾನಂದರು ೧೯೨೪ರಲ್ಲಿ ಹೇಳಿದ ಮಾತು: ‘‘ಸ್ವಾಮಿ ವಿವೇಕಾ ನಂದರು ಈಗಲೂ ಬೇಲೂರು ಮಠದಲ್ಲಿ ವಾಸವಾಗಿದ್ದಾರೆ. ಅದೆಷ್ಟು ಜನ ಅವರನ್ನು ಈ ಕೋಣೆಯಲ್ಲಿ ಧ್ಯಾನಮಗ್ನರಾಗಿ ಕುಳಿತಿರುವುದನ್ನು ಕಂಡಿದ್ದಾರೆ!’’

ಸ್ವಾಮಿ ವಿಜ್ಞಾನಾನಂದರನ್ನು ಯಾರೋ ಒಬ್ಬರು ಕೇಳಿದರಂತೆ, ‘‘ನೀವು ಈಗಲೂ ಸ್ವಾಮೀಜಿಯವರನ್ನು ನೋಡುತ್ತಿದ್ದೀರಾ?’’ ಎಂದು. ಆಗ ಅವರು, ‘‘ಸ್ವಾಮಿ ವಿವೇಕಾನಂದರು ಇಲ್ಲಿಯೇ ವಾಸ ವಾಗಿರುವಾಗ ಅವರನ್ನು ನೋಡದೆ ಇರಲಿಕ್ಕಾಗುತ್ತದೆಯೆ?’’ ಎಂದ ರಂತೆ. ಮುಂದೊಂದು ಬಾರಿ ಅವರು ಇನ್ನೂ ಸ್ಪಷ್ಟವಾಗಿ ಹೇಳಿ ದರು: ‘‘ಸ್ವಾಮೀಜಿ ಈಗಲೂ ಇದ್ದಾರೆ. ನಾನು ಅವರ ಕೊಠಡಿಯ ಮುಂದೆ ಹೋಗುವಾಗ ಅವರಿಗೆ ಎಲ್ಲಿ ತೊಂದರೆಯಾಗುವುದೋ ಎಂದು ಸದ್ದಾಗದ ಹಾಗೆ ತುದಿಗಾಲಿನಲ್ಲಿ ನಡೆದು ಹೋಗುತ್ತೇನೆ. ಸಾಮಾನ್ಯವಾಗಿ ನಾನು ಅವರ ಕೊಠಡಿಯ ಒಳಗೆ ನೋಡುವುದಿಲ್ಲ – ಎಲ್ಲಿ ಅವರ ದೃಷ್ಟಿ ನನ್ನ ಮೇಲೆ ಬೀಳುತ್ತದೆಯೋ ಎಂಬ ಭಯ!’’

೧೯೩೩ರ ವಾರ್ಷಿಕ ದುರ್ಗಾಪೂಜೆಯ ಸಮಯ. ಸ್ವಾಮಿ ಅಖಂಡಾನಂದರು ಬೇಲೂರು ಮಠಕ್ಕೆ ಬಂದಿದ್ದರು. ಒಂದು ರಾತ್ರಿ ವಿವೇಕಾನಂದರು ಅವರಿಗೆ ಕನಸಿನಲ್ಲಿ ದರ್ಶನವಿತ್ತು ತಮ್ಮ ಒಂದು ಕಷ್ಟವನ್ನು ಅವರಲ್ಲಿ ತೋಡಿಕೊಂಡರು: ‘‘ಗಂಗಾ, ನೋಡು ನನ್ನ ಬಟ್ಟೆಗಳು ನುಸಿಗುಳಿಗೆಗಳ ವಾಸನೆಯಿಂದ ನಾರುತ್ತಿದೆ. ಇಂದು ವಿಶೇಷ ದಿನ, ನನಗೆ ಹೊಸ ಬಟ್ಟೆಗಳನ್ನು ಕೊಡುವುದಿಲ್ಲವೆ?’’ ಅಖಂಡಾನಂದರು ತಕ್ಷಣ ನಿದ್ದೆಯಿಂದೆದ್ದು ಪೂಜಾರಿಯ ಬಳಿ ಹೋಗಿ ಅವರನ್ನು ಎಬ್ಬಿಸಿದರು. ಸ್ವಾಮೀಜಿಯವರ ಚಿತ್ರಪಟಕ್ಕೆ ಉಡಿಸಲಾಗಿದ್ದ ವಸ್ತ್ರಗಳನ್ನು ಆ ಕೂಡಲೇ ಬದಲಾಯಿಸಿ ಆರತಿ ಯನ್ನು ಮಾಡಿದರಂತೆ.

ಸ್ವಾಮಿ ವಿವೇಕಾನಂದರ ಕೋಣೆಯ ಬಳಿಯೇ ಒಂದು ಮಾವಿನ ಮರವಿದೆ. ಬೇಲೂರು ಮಠದ ಜಾಗವನ್ನು ೧೮೯೮ರಲ್ಲಿ ಖರೀದಿಸಲಾದ ಸಮಯದಿಂದಲೂ ಇರುವ ಈ ಮರ, ಇಲ್ಲಿ ನಡೆದ ಎಲ್ಲ ಲೌಕಿಕ–ಅಲೌಕಿಕ ಘಟನೆಗಳಿಗೆ ಜೀವಂತ ಸಾಕ್ಷಿಯಾಗಿ ನಿಂತಿದೆ. ಈ ಮರದ ಕೆಳಗೆ ವಿವೇಕಾನಂದರು ಒಂದು ಕ್ಯಾನ್‌ವಾಸ್ ಮಂಚದ ಮೇಲೆ ಬೆಳಗಿನ ಹೊತ್ತು ಕುಳಿತುಕೊಂಡು ಪತ್ರ ವ್ಯವ ಹಾರ ನಡೆಸುತ್ತಿದ್ದರು. ಇಲ್ಲವೇ ತಮ್ಮನ್ನು ನೋಡಲು ಬಂದಿದ್ದ

ಅತಿಥಿಗಳನ್ನು ಭೇಟಿಯಾಗುತ್ತಿದ್ದರು. ಈ ಮಹತ್ವಪೂರ್ಣವಾದ ಮರವನ್ನು ಬಹಳ ಜೋಪಾನವಾಗಿ ರಕ್ಷಿಸಿಕೊಂಡು ಬರಲಾಗಿದೆ.

ಬೇಲೂರು ಮಠದಲ್ಲಿ ವಿವೇಕಾನಂದರ ಕೋಣೆಯಷ್ಟೇ ಅಲ್ಲದೆ ಅವರ ಒಂದು ಮಂದಿರವೂ ಇದೆ. ಈ ಮಂದಿರವಿರುವ ಜಾಗವನ್ನು ವಿವೇಕಾನಂದರೇ ಆಯ್ಕೆ ಮಾಡಿದ್ದರು. ಮಹಾಸಮಾಧಿ ಹೊಂದುವ ಮೂರು ದಿನಗಳ ಹಿಂದೆ ಅವರು ಬೇಲೂರು ಮಠದ ಪ್ರಾಂಗಣದಲ್ಲಿ ಅಪರಾಹ್ನದ ಸಮಯದಲ್ಲಿ ಹಾಗೆಯೇ ವಿಹರಿಸುತ್ತಿದ್ದರು. ಅವರ ಜೊತೆಯಲ್ಲಿ ಸ್ವಾಮಿ ಪ್ರೇಮಾನಂದರು ಇದ್ದರು. ಹೀಗೆ ಓಡಾಡುತ್ತಿದ್ದ ವಿವೇಕಾನಂದರು ಗಂಗೆಯ ದಡದ ಮೇಲೆ ಒಂದು ಜಾಗವನ್ನು ಬೆರಳಿನಿಂದ ತೋರಿಸಿ ಪ್ರೇಮಾನಂದರಿಗೆ ಹೇಳಿದರು, ''ನಾನು ಈ ಶರೀರವನ್ನು ತ್ಯಜಿಸಿದ ಮೇಲೆ ಇಲ್ಲಿ ಅದನ್ನು ಅಗ್ನಿಗೆ ಸಮರ್ಪಿಸು.'' ಇಚ್ಛಾಮರಣಿಯಾದ ವಿವೇಕಾನಂದರು ಮೂರು ದಿನಗಳ ನಂತರ ಧ್ಯಾನದಲ್ಲಿ ತಮ್ಮ ದೇಹವನ್ನು ಹಳೆಯದಾದ ಬಟ್ಟೆಯಂತೆ ತ್ಯಜಿಸಿದರು. ನಂತರ ಅವರ ಇಚ್ಛೆಯಂತೆ ಅವರು ತೋರಿಸಿದ್ದ ಜಾಗದಲ್ಲಿಯೇ ಅಂತ್ಯಸಂಸ್ಕಾರ ನಡೆಯಿತು. ಮುಂದೆ ಈ ಜಾಗದ ಮೇಲೆ ಒಂದು ಸುಂದರವಾದ ಮಂದಿರವು ನಿರ್ಮಾಣವಾಯಿತು. ಈ ಮಂದಿರದ ಬಳಿಯೇ ಒಂದು ಬಿಲ್ವವೃಕ್ಷವಿದೆ. ವಿವೇಕಾನಂದರ ಕಾಲದಲ್ಲಿಯೂ ಸಹ ಇದೇ ಜಾಗದಲ್ಲಿ ಬಿಲ್ವವೃಕ್ಷವೊಂದಿತ್ತು. ಅವರು ಆ ಮರದ ಕೆಳಗೆ ಆಗಾಗ ಕುಳಿತುಕೊಳ್ಳುತ್ತಿದ್ದರು.

ಸ್ವಾಮಿ ಬ್ರಹ್ಮಾನಂದರು ಶ್ರೀರಾಮಕೃಷ್ಣರ ಮಾನಸಪುತ್ರರೆಂದೇ ನಮ್ಮ ಭಕ್ತವಲಯದಲ್ಲಿ ಪ್ರತೀತಿ. ಅವರದು ಮಹಾನ್ ಆಧ್ಯಾತ್ಮಿಕ ವ್ಯಕ್ತಿತ್ವ. ಇವರು ರಾಮಕೃಷ್ಣ ಸಂಘದ ಪ್ರಥಮ ಅಧ್ಯಕ್ಷರಾಗಿ ಸಂಘವನ್ನು ಮುನ್ನಡೆಸಿದವರು. ಅವರ ನೆನಪನ್ನು ಚಿರಸ್ಥಾಯಿಗೊಳಿಸಲು ಒಂದು ಆಕರ್ಷಕವಾದ ಮಂದಿರವನ್ನು ಅವರ ಅಗ್ನಿಸಂಸ್ಕಾರ ನಡೆದ ಸ್ಥಳದಲ್ಲಿಯೇ ನಿರ್ಮಿಸಲಾಯಿತು. ಈ ಮಂದಿರದಲ್ಲಿ ಭಾವೋನ್ಮತ್ತರಾಗಿ ಕುಳಿತಿರುವ ಅವರ ಅಮೃತಶಿಲೆಯ ವಿಗ್ರಹವಿದೆ. ಈ ವಿಗ್ರಹದ ಮುಂದೆಯೇ ಒಂದು ಚಿಕ್ಕ ಸಿಂಹಾಸನದಲ್ಲಿ ಧಾತುವಿನಿಂದ ಮಾಡಲ್ಪಟ್ಟ ಬಾಲಗೋಪಾಲನ ವಿಗ್ರಹವಿದೆ. ಶ್ರೀರಾಮಕೃಷ್ಣರು ದರ್ಶನದಲ್ಲಿ ಕಂಡಿದ್ದಂತೆ ಸ್ವಾಮಿ ಬ್ರಹ್ಮಾನಂದರು ಹಿಂದೆ ದ್ವಾಪರದಲ್ಲಿ ಶ್ರೀಕೃಷ್ಣನ ಸಂಗಡಿಗರಾಗಿದ್ದರು. ಹಾಗಾಗಿ ಅವರ ದೇವಸ್ಥಾನದಲ್ಲಿ ಬಾಲಗೋಪಾಲನಿಗೂ ಪೂಜೆ ಸಲ್ಲಿಸಲಾಗುತ್ತದೆ.

ವಿವೇಕಾನಂದರು, ಬ್ರಹ್ಮಾನಂದರಲ್ಲದೆ ಇನ್ನೂ ಏಳು ಜನ ಶ್ರೀರಾಮಕೃಷ್ಣರ ನೇರ ಶಿಷ್ಯರು ಬೇಲೂರು ಮಠದಲ್ಲಿಯೇ ತಮ್ಮ ನಶ್ವರ ದೇಹವನ್ನು ತ್ಯಜಿಸಿದರು. ಇವರೆಲ್ಲರ ಅಂತ್ಯಸಂಸ್ಕಾರ ನಡೆದ ಸ್ಥಳವನ್ನು 'ಸಮಾಧಿಪೀಠ' ಎನ್ನುತ್ತಾರೆ. ಇದೂ ಸಹ ಬಹಳ ಪವಿತ್ರವಾದ ಸ್ಥಳ.

ಆಧ್ಯಾತ್ಮಿಕವಾಗಿ ಈ ಎಲ್ಲ ಸ್ಥಾನಗಳಷ್ಟೇ ಮಹತ್ವವುಳ್ಳದ್ದು ಇಲ್ಲಿರುವ ವಸ್ತು ಸಂಗ್ರಹಾಲಯ. ಇದರಲ್ಲಿ ದಿವ್ಯತ್ರಯರು ಹಾಗೂ ಬ್ರಹ್ಮಾನಂದಾದಿ ನೇರ ಶಿಷ್ಯರು ಉಪಯೋಗಿಸಿದಂತಹ ಹಲವಾರು ದಿನನಿತ್ಯದ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ. ಅಷ್ಟೇ ಅಲ್ಲದೆ ಇವರುಗಳ ಚರಿತ್ರೆಗೆ ಸಂಬಂಧಿಸಿದಂತೆ ಸ್ಥಳಗಳ ಪ್ರತಿಕೃತಿಗಳು, ಚಿತ್ರಗಳು ಇವೆ. ದಿವ್ಯತ್ರಯರ ಬಗ್ಗೆ ಸ್ವಲ್ಪವಾದರೂ ಓದಿಕೊಂಡಿರುವ ಭಕ್ತರಿಗೆ ಈ ಸಂಗ್ರಹಾಲಯದ ವೀಕ್ಷಣೆಯು ದೇಶಕಾಲಗಳನ್ನು ಮೀರಿಹೋಗಿ ಮತ್ತೊಮ್ಮೆ ಆ ಮಹಾನ್ ಚೇತನಗಳು ನಡೆಸಿಹೋದ ಲೀಲಾಕಾರ್ಯದಲ್ಲಿ ತಾವೂ ಭಾಗವಹಿಸುವಂತಹ ಅನುಭವವನ್ನು ಉಂಟುಮಾಡುತ್ತದೆ.

ಬೇಲೂರು ಮಠ ಅತ್ಯುತ್ತಮ ತೀರ್ಥಕ್ಷೇತ್ರವೆಂದೆನಿಸುವುದು ಕೇವಲ ಗತವೈಭವದ ಕಾರಣದಿಂದ ಎಂದು ಭಾವಿಸಬಾರದು. ಇಲ್ಲಿಯ ಆಧ್ಯಾತ್ಮಿಕ ಸಂಪತ್ತು ಎಂದಿಗೂ ಮಾಸದೆ ಹೊಸಜೀವನದಿಂದ ಕಂಗೊಳಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ಇಲ್ಲಿ ವಾಸವಾಗಿರುವ ಮುನ್ನೂರಕ್ಕೂ ಹೆಚ್ಚು ಸಂನ್ಯಾಸಿಗಳು ಹಾಗೂ ಬ್ರಹ್ಮಚಾರಿಗಳು. ಯಾವುದೇ ಪ್ರಾಪಂಚಿಕ ಚಿಂತೆ ಅಥವಾ ಲೋಭವಿಲ್ಲದೆ ಕೇವಲ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಾಗೂ ಜಗತ್ತಿನ ಕಲ್ಯಾಣಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿರುವ ಸಾಧಕರ ಬಳಗವಿದೆ. ಇವರೆಲ್ಲರ ಶಿಖರಪ್ರಾಯವಾಗಿ ಶ್ರೀರಾಮಕೃಷ್ಣರ ಜೀವಂತ ಪ್ರತಿರೂಪವೆಂದು ಭಕ್ತರಿಂದ ಗೌರವಿಸಲ್ಪಟ್ಟ ಪರಮ ಪೂಜನೀಯ ಸಂಘಾಧ್ಯಕ್ಷ ಸ್ವಾಮಿಗಳು ಮತ್ತು ಇನ್ನಿತರ ಸಂನ್ಯಾಸಿಗಳು ಸದಾ ನೆಲೆಸಿರುವ ಇದು ಪುಣ್ಯಕ್ಷೇತ್ರವಲ್ಲದೆ ಬೇರೇನಾದೀತು?

ಬೇಲೂರು ಮಠದಲ್ಲಿ ಇನ್ನೂ ಒಂದು ಗಮನಿಸಬೇಕಾದ ಅಂಶವೆಂದರೆ ಇಲ್ಲಿಯ ನಿರಾಡಂಬರತೆ. ಹಾಗೆಯೇ ಎಲ್ಲ ರೀತಿಯ ವಾಣಿಜ್ಯ ಚಟುವಟಿಕೆಗಳಿಂದ ಸಂಪೂರ್ಣ ಮುಕ್ತವಾದ ಪರಿಸರ ಇಲ್ಲಿಯದು. ಎಲ್ಲ ಕಾರ್ಯಕಲಾಪಗಳಲ್ಲಿ ಹಬ್ಬ ಹರಿದಿನಗಳ ಆಚರಣೆಯಲ್ಲಿ ಆಧ್ಯಾತ್ಮಿಕ ಆದರ್ಶವನ್ನು ಎತ್ತಿಹಿಡಿಯುವ ಸತತ ಪ್ರಯತ್ನ ನಡೆಯುತ್ತಿದೆ. ಹೀಗಾಗಿ ಭಗವಚ್ಚಿಂತನೆ ಮಾಡಲೆಂದು ಬರುವ ಭಕ್ತರು ಇಲ್ಲಿ ಹೆಚ್ಚಾಗಿ ಪ್ರಯಾಸ ಪಡಬೇಕಾಗಿಲ್ಲ. ಅವರ ಮನಸ್ಸು ತಾನಾಗಿಯೇ ಶಾಂತವಾಗಿ, ಧ್ಯಾನ-ಜಪಗಳು ಸಹಜವಾಗಿ ನಡೆಯುತ್ತವೆ.

ಕಾಶಿ, ಅಯೋಧ್ಯಾ, ಮಥುರಾ ಮುಂತಾದ ಪ್ರಾಚೀನ ತೀರ್ಥಕ್ಷೇತ್ರಗಳಿಗೆ ಹೋಲಿಸಿದರೆ ಬೇಲೂರು ಮಠ ತೀರಾ ಇತ್ತೀಚಿನದು. ಆದರೆ ಮಾಹಾತ್ಮ್ಯೆಯ ದೃಷ್ಟಿಯಿಂದ ನೋಡಿದಾಗ ಈ ಮಠವು ಉಳಿದ ಪುಣ್ಯಸ್ಥಳಗಳಿಗೇನೂ ಕಡಿಮೆಯಾದದ್ದಲ್ಲ. ಸರ್ವಜ್ಞನೂ ಸರ್ವಶಕ್ತನೂ ದಯಾರೂಪಿಯೂ ಆದ ಭಗವಂತನು ಆಧುನಿಕ ಕಾಲದಲ್ಲಿ ಶ್ರೀರಾಮಕೃಷ್ಣರಾಗಿ ಅವತರಿಸಿ ಬಂದನು. ತಮ್ಮ ಅವತಾರದ ಮುಖ್ಯ ಉದ್ದೇಶವಾದ ಧರ್ಮಸ್ಥಾಪನೆಯನ್ನು ಶ್ರೀರಾಮಕೃಷ್ಣರು ಮಾನವ ಜನಾಂಗಕ್ಕೆ ಹಲವು ಕೊಡುಗೆಗಳನ್ನು ನೀಡುವುದರ ಮೂಲಕ ಸಾಧಿಸಿದರು. ಹೀಗೆ ಅವರಿತ್ತ ಕೊಡುಗೆಗಳಲ್ಲಿ ಮುಖ್ಯವಾದ ಒಂದು ಕೊಡುಗೆಯೆಂದರೆ ಪಾವನಕ್ಷೇತ್ರವಾದ ಬೇಲೂರು ಮಠ. ✽